ಕೊಡಗಿನಲ್ಲಿ ಅಕ್ರಮ ಸಕ್ರಮ ಯೋಜನೆಯಡಿ ಮಂಜೂರಾದ ಬಾಗದ ದುರಸ್ಥಿ

584 (999) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗಿನಲ್ಲಿ ಅಕ್ರಮ ಸಕ್ರಮ ಯೋಜನೆಯಡಿ ಮಂಜೂರು ಮಾಡಿದ ಜಾಗಗಳ ದುರಸ್ತಿಗಾಗಿ ಎಷ್ಟು ಕಡತಗಳು ಬಾಕಿ ಇವೆ; ಎಷ್ಟು ಅವಧಿಯಲ್ಲಿ ದುರಸ್ತಿ ಕಾರ್ಯ ಪೂರ್ಣಗೊಳಿಸಿ ಆಕಾರ ಬಂದಿದೆ ಸೇರ್ಪಡೆಗೊಳಿಸಲಾಗುವುದು. (ವಿವರ ನೀಡುವುದು);

ಆ) ಫಾರಂ 1 ರಲ್ಲಿ ಮನೆಗಳ ಮಂಜೂರಾತಿ ಪಡೆದವರಿಗೆ ಯಾವ ಮಾನದಂಡದ ಆಧಾರದ ಮೇಲೆ ಟಿ.ಟಿ. ದಂಡ ಶುಲ್ಕ ವಿಧಿಸಲಾಗುತ್ತಿದೆ; ಇವರಿಗೆ ಉಚಿತವಾಗಿ ನಿವೇಶನ ವಿತರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಒಟ್ಟು 2036

ದುರಸ್ತಿಗಾಗಿ ಬಾಕಿ ಇರುವ ಎಲ್ಲಾ ಪ್ರಕರಣಗಳು ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಯಲ್ಲಿ ಬಾಕಿ ಇದೆ.

ಆ) ಟಿ.ಟಿ. ದಂಡ ವಿಧಿಸುತ್ತಿಲ್ಲ ರೂ. 11,800-00 ವಾರ್ಷಿಕ ಆದಾಯ ಇರುವವರಿಗೆ ನಗರ ಮಿತಿಯಲ್ಲಿ 20' x 30' ಹಾಗೂ ಇತರೆ ಸ್ಥಳಗಳಲ್ಲಿ 20' x 40' ವಿಸ್ತೀರ್ಣಕ್ಕೆ ಮಿತಿಗೊಳಿಸಿ ಮುಫತ್ತಾಗಿ ಜಮೀನು ಖಾಯಂಗೊಳಿಸುವ ಬಗ್ಗೆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಕೊಡಗು ಜಿಲ್ಲೆಯಲ್ಲಿ ಸೆಟ್ಲ ಮೆಂಟ್ ಸರ್ವೆ ಕಾರ್ಯ

585 (1000) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯಲ್ಲಿ ಸೆಟ್ಲ ಮೆಂಟ್ ಸರ್ವೆ ಆಗಿದೆಯೇ ಯಾವ ಸರ್ವೆ ಕಾರ್ಯ ಮಾಡಲಾಗಿದೆ.

ಆ) ಸರ್ವೆ ಕಾರ್ಯಕ್ಕೆ ಎಷ್ಟು ಹಣ ಖರ್ಚಾಗಿದೆ ಸರ್ವೆ ಕಾರ್ಯಕ್ಕಾಗಿ ಎಷ್ಟು ಮಂದಿ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿತ್ತು (ವಿವರ ನೀಡುವುದು)?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ಸಚಿವರು) :

ಅ) ಕೊಡಗು ಜಿಲ್ಲೆಯಲ್ಲಿ ರೀಸರ್ವೆ ಕಾರ್ಯವನ್ನು ಸರ್ಕಾರದ ಆದೇಶ ಸಂಖ್ಯೆ ಆರ್. ಡಿ.ಎಸ್.ಎಲ್. ಆರ್. 77. ತಾ 27-02-78 ರ ಅನ್ವಯ ಪ್ರಾರಂಭಿಸಿ 1994 ರ ಅಂತ್ಯದವರೆಗೆ 272 ಗ್ರಾಮಗಳ ರೀಸರ್ವೆ ಕಾರ್ಯ ಮಾಡಲಾಗಿದೆ.

ಆ) ಸರ್ವೆ ಕಾರ್ಯಕ್ಕೆ 1978-79 ಸಾಲಿನಿಂದ 1994-95 ನೇ ಸಾಲಿನವರೆಗೆ ರೂ. 8. 45.28,294.00 ಖರ್ಚು ಆಗಿರುತ್ತೆ ರೀ ಸರ್ವೆ ಕಾರ್ಯಕ್ಕಾಗಿ ಒಟ್ಟು 358 ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ ಆರ್.ಡಿ. 118 ಎಫ್.ಎಲ್.ಆರ್. 77 ತಾ।। 27-02-78 ರಂತೆ ಸೃಜಿಸಲಾಗಿತ್ತು.

ಭೂದಾಖಲೆಗಳ ಉಪ ನಿರ್ದೇಶಕರು	-	1
ಭೂದಾಖಲೆಗಳ ಸಹಾಯಕ ನಿರ್ದೇಶಕರು	-	5